K-tech

भारतीय विज्ञान संस्थान

KSCST

ಸೈಸೆಕ್ ಕೆ-ಟೆಕ್ ಉನ್ನತಜ್ಞಾನ ಕೇಂದ್ರ ಸೈಬರ್ ಸೆಕ್ಯುರಿಟಿ ಕರ್ನಾಟಕ

CySecK Cyber Security Karnataka K-Tech CoE for Cyber Security

# ಸೈಬರ್ ವಾರ್ತಿಕ

## ನವೆಂಬರ್ 2022

# CYBER VARTIKA

## NOVEMBER 2022

## ಈ ಸಂಚಿಕೆಯಲ್ಲಿ

-ಮುನ್ನುಡಿ

-ಸಂಗ್ರಹಿಸಿದ ಸುದ್ದಿ

-ಸೈಸೆಕ್ ಸಂಪಾದಕರ ಅಂಕಣ

-ಜಾಗೃತಿ ಇನ್ಫೋಗ್ರಾಫಿಕ್ಸ್

--ಸೈಸೆಕ್ ವರದಿ

## IN THIS ISSUE

-Foreword

-Curated news

-CySecK Editor's Corner

-Awareness Infographics

-CySecK Updates

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ! https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE! https://zcmp.in/BH6y

CySeck CoE | CySecK | @CySecKCoE | CySeck CoE | CySecK | CySecK | CySecKCoE | Koo App @CySecK

# ಮುನ್ನುಡಿ | FOREWORD



**ಸುಚಿತ್ರ ಕೆ**
ಸಿಓಇ ಮುಖ್ಯಸ್ಥರು-ಅಪ್ಲಿಕೇಶನ್ ಸೆಕ್ಯುರಿಟಿ ಮತ್ತು DevSecOps
ಟೆಕ್ ಮಹೀಂದ್ರ

**Suchitra K**
COE Head-Application Security and Devsecops
Tech Mahindra

ಸೈಬರ್ ಸುರಕ್ಷತೆ ಕೆಲಸದಲ್ಲಿ 15 ಕ್ಕಿಂತ ಹೆಚ್ಚಿನ ವರ್ಷಗಳ ಅನುಭವವಿರುವ ನನಗೆ, ಸೈಬರ್ ವಾರ್ತಿಕಾದ ತಿಂಗಳ ಸಂಚಿಕೆ ಓದುವುದು ಮನಸ್ಸಿಗೆ ಯಾವಾಗಲೂ ಮುದ ನೀಡುತ್ತದೆ. ಇತ್ತೀಚಿನ ಸೈಬರ್ ಸುರಕ್ಷತೆ ದಾಳಿಗಳ ಬಗೆಗಿನ ಎಲ್ಲ ವಿವರಗಳನ್ನು ತಿಳಿಯಲು ಮತ್ತು ಸರ್ಕಾರದ ಹಲವು ತೊಡಗಿಕೆಗಳೊಂದಿಗೆ ಹೇಗೆ ಸೈಬರ್ ಸುರಕ್ಷತೆಯ ತಿಳಿವು ಹೆಚ್ಚುತ್ತಿದೆ ಎಂದು ಅರಿತುಕೊಳ್ಳಲು ಸೈಬರ್ ವಾರ್ತಿಕಾ ಒಳ್ಳೆಯ ಸುದ್ದಿಯೋಲೆ ಆಗಿದೆ.

ನವೆಂಬರ್‌ನಲ್ಲಿ ಬಿಡುಗಡೆಯಾದ PWC ವರದಿಯ ಪ್ರಕಾರ, ಕಳೆದ ಮೂರು ವರ್ಷಗಳಲ್ಲಿ ಜಗತ್ತಿನ ಪ್ರತಿ ನಾಲ್ಕರಲ್ಲಿ ಒಂದು ಸಂಸ್ಥೆಯು ಡೇಟಾ ಸೋರಿಕೆಯಿಂದಾಗಿ 20 ಮಿಲಿಯನ್ ಡಾಲರ್‌ಗಿಂತ ಹೆಚ್ಚಿನ ನಷ್ಟಕ್ಕೆ ಒಳಗಾಗಿದೆ. ಜಾಗತಿಕವಾಗಿ ಹೆಚ್ಚುತ್ತಿರುವ ಡಿಜಿಟಲ್ ಬಳಕೆಯಿಂದಾಗಿ ಸೈಬರ್ ಸುರಕ್ಷತೆ ದಾಳಿಗಳು ಕೂಡ ಹೆಚ್ಚಾಗುತ್ತಿವೆ. ನವೆಂಬರ್ ತಿಂಗಳ ಸೈಬರ್ ವಾರ್ತಿಕಾ ಪ್ರಮುಖ ಸೈಬರ್ ಸುದ್ದಿಗಳನ್ನು ಹೊತ್ತು ತಂದಿದೆ. ಇದರ ಜೊತೆಗೆ ಹಲವಾರು ಡೇಟಾ ಕಳ್ಳತನ, ಡೇಟಾ ಸೋರಿಕೆ, UPI ಮತ್ತು ಆನ್‌ಲೈನ್ ಮೋಸಗಳ ಸುದ್ದಿಗಳು ಕೂಡ ಇರಲಿವೆ.

ನವೆಂಬರ್‌ನಲ್ಲಿ ನಡೆದ ಪ್ರಮುಖ ಸೈಬರ್ ಸುರಕ್ಷತೆ ದಾಳಿಗಳಲ್ಲೊಂದು, ದೆಹಲಿಯಲ್ಲಿರುವ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆ ಏಐಐಎಮ್‌ಎಸ್ ಮೇಲೆ ನಡೆದ ರ್‍ಯಾನ್ಸಮ್‌ವೇರ್ ದಾಳಿ. ಸೈಬರ್ ಜಗತ್ತಿನಲ್ಲಿ ದೊಡ್ಡ ಸುದ್ದಿಯಾದ ಈ ದಾಳಿಯಿಂದ ಎಷ್ಟು ನಷ್ಟವಾಯಿತು ಎಂಬ ಹೆಚ್ಚಿನ ಮಾಹಿತಿಗಾಗಿ ಮುಂದೆ ಓದಿ ತಿಳಿಯುವಿರಿ.

ಸೈಬರ್ ಸುರಕ್ಷತೆ ಕ್ಷೇತ್ರದಲ್ಲಿ ಮಹಿಳೆಯರ ಎಣಿಕೆಯನ್ನು ಹೆಚ್ಚಿಸಲು ಹಲವು ತೊಡಗಿಕೆಗಳನ್ನು ಶುರುಮಾಡಲಾಗಿದೆ. ಹಲವು ಲಾಭ-ರಹಿತ ಭದ್ರತೆಸಂಸ್ಥೆಗಳೂ ಸೇರಿದಂತೆ ಪ್ರತಿ ಸಂಸ್ಥೆಯು, ಸೈಬರ್ ಕ್ಷೇತ್ರದಲ್ಲಿ ಹೆಚ್ಚೆಚ್ಚು ಮಹಿಳೆಯರು ತೊಡಗಿಸಿಕೊಳ್ಳುವುದನ್ನು ಮತ್ತು ಅವರು ಕೆಲಸದಲ್ಲಿಉಂಟುಮಾಡುವ ವ್ಯತ್ಯಾಸವನ್ನು ಬೆಂಬಲಿಸುತ್ತಾ ಬಂದಿದೆ. ಇದೇ ಹಾದಿಯಲ್ಲಿ, ರಾಷ್ಟ್ರೀಯ ಮಹಿಳಾ ಆಯೋಗ (NCW) 'ಡಿಜಿಟಲ್ ಶಕ್ತಿ' ಎಂಬಕಾರ್ಯಕ್ರಮವನ್ನು ಬಿಡುಗಡೆ ಮಾಡಿದೆ. ಇದು ಮಹಿಳೆಯರಲ್ಲಿ ಡಿಜಿಟಲ್ ಕೌಶಲ್ಯದ ಬೆಳವಣಿಗೆಗೆ ನೆರವಾಗುತ್ತದೆ. ಈ ತೊಡಗಿಕೆಯನ್ನು 2018 ರಲ್ಲಿ ಶುರುಮಾಡಲಾಯಿತು. ಸೈಬರ್ ಅಪರಾಧಗಳನ್ನು ಎದುರಿಸಲು ಮಹಿಳೆಯರಿಗೆ ತರಬೇತಿ ನೀಡುವುದು ಇದರ ಗುರಿಯಾಗಿದೆ. ಸೈಬರ್ ಅಪರಾಧ ನಡೆದಾಗ, ಅದನ್ನು ವರದಿ ಮಾಡುವ ಬಗೆಗಿನ ತಿಳಿವು ಮತ್ತು ಸೈಬರ್ ಸುರಕ್ಷತೆ ಸಲಹೆಗಳನ್ನು ಒದಗಿಸುವುದು ಇದರ ಪ್ರಮುಖ ಗುರಿಗಳಾಗಿವೆ.

ನವೆಂಬರ್ 30ನೇ ದಿನಾಂಕವನ್ನು "ಅಂತರರಾಷ್ಟ್ರೀಯ ಕಂಪ್ಯೂಟರ್ ಭದ್ರತೆ ದಿನ" ಎಂದು ಆಚರಿಸಲಾಗುತ್ತದೆ. ಸೈಬರ್ ವಾರ್ತಿಕಾದ ಈ ಸಂಚಿಕೆ, ಕಂಪ್ಯೂಟರ್ ಭದ್ರತೆ ತೊಂದರೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ವೈಯಕ್ತಿಕ ಡೇಟಾದ ಮಹತ್ವ ಮತ್ತು ಗೌಪ್ಯತೆಯನ್ನುಕಾಪಾಡಿಕೊಳ್ಳುವು ದಾರಿಗಳ ಬಗ್ಗೆ ತಿಳಿಸಿಕೊಡಲಿದೆ. ವೈಯಕ್ತಿಕ ಡೇಟಾವನ್ನು ಕಾಪಾಡಿಕೊಳ್ಳಲು 5 ಪ್ರಮುಖ ಉಪಾಯಗಳಿವೆ. ಸೈಬರ್ ವಾರ್ತಿಕಾ ಈಉಪಾಯಗಳ ಗುಟ್ಟನ್ನು ನಿಮಗೆ ಬಿಟ್ಟುಕೊಡಲಿದೆ.

ಸೈಬರ್ ಅಪಾಯಗಳನ್ನು ಕೆಚ್ಚಿನಿಂದ ಎದುರಿಸಲು ತಿಳಿವು ಮೂಡಿಸಿಕೊಳ್ಳಿ, ಚುರುಕಾಗಿರಿ ಮತ್ತು ಸೈಬರ್ ಸುರಕ್ಷಿತವಾಗಿರಿ. ನಿಮ್ಮದೇ ಡೇಟಾ ಕಾಪಾಡಿಕೊಳ್ಳಲು ನಿಮ್ಮ ಪ್ರಯತ್ನವಿರಲಿ!!

ನಲಿವಿನಿಂದ ಓದಿ!!

Being a cybersecurity professional with 15+ years of experience, I have always enjoyed reading the monthly edition of Cyber Vartika as it is the one-stop shop to know all about the latest cybersecurity attacks and how the awareness of cybersecurity is increased with various initiatives taken up by the government.

According to a PWC report released in November, one in every four organizations in the world has experienced a data breach that cost $20 million or more in the last three years. The growing digitization globally has also made way for increased cybersecurity attacks. The November edition of Cyber Vartika brings top cyber news to you, including information across the various breaches observed, data leaks, UPI, and online frauds and scams.

One of the significant cybersecurity attacks to be highlighted in November is when AIIMS-India's most prestigious medical institute in Delhi, was hit by a Ransomware attack that made big news in the cyber world. Read on to know more about the extent of damage caused. Many initiatives have been taken up globally to increase the Women in Cyber. Every organization, including many non-profitable security organizations, has been promoting more women in cyber and the difference they make to the job profile. On similar lines, National Commission for Women (NSW) has launched a program named Digital Shakti designed to make women digitally more skilled and equipped. This initiative was launched in 2018, aiming to train women to combat cybercrime. The main goals include providing cyber security safety tips and awareness on reporting in case of a cyber incident. November 30th is observed as "International Computer security Day", this edition of Cyber Vartika is dedicated to raising public awareness of computer security issues, the importance of personal data, and methods of safeguarding one's privacy.

There are the top 5 things one should do to protect personal data, and Cyber Vartika brings you these quick tips.

Be aware, be proactive, and cyber safe to combat the growing cybersecurity threat landscape.

Do your bit today to protect your own data!!

Happy reading!!

# ಪ್ರಮುಖ ಸೈಬರ್ ಸುದ್ದಿ

## ಮಹಿಳೆಯರಲ್ಲಿ ಡಿಜಿಟಲ್ ಕೌಶಲ್ಯದ ಬೆಳವಣಿಗೆಗೆ ನೆರವಾಗುವ ಡಿಜಿಟಲ್ ಶಕ್ತಿ ಕಾರ್ಯಕ್ರಮದ ಇತ್ತೀಚಿನ ಆವೃತ್ತಿಯನ್ನು NCW ಬಿಡುಗಡೆ ಮಾಡಿತು

ನವೆಂಬರ್‌ನಲ್ಲಿ, ರಾಷ್ಟ್ರೀಯ ಮಹಿಳಾ ಆಯೋಗ (NCW) ತನ್ನ 'ಡಿಜಿಟಲ್ ಶಕ್ತಿ' ಕಾರ್ಯಕ್ರಮದ 4.0 ಆವೃತ್ತಿಯನ್ನು ಬಿಡುಗಡೆ ಮಾಡಿತು. ಆನ್‌ಲೈನ್‌ನಲ್ಲಿ ಹೇಗೆ ಸುರಕ್ಷಿತವಾಗಿರಬೇಕೆಂದು ಮಹಿಳೆಯರಿಗೆ ಕಲಿಸಲು ಇದನ್ನು ಡಿಸೈನ್ ಮಾಡಲಾಗಿದೆ. ಡಿಜಿಟಲ್ ಶಕ್ತಿ ತೊಡಗಿಕೆಯನ್ನು 2018 ರಲ್ಲಿ ಶುರುಮಾಡಲಾಯಿತು. ಸೈಬರ್ ಅಪರಾಧಗಳನ್ನು ಎದುರಿಸಲು ಮಹಿಳೆಯರಿಗೆ ತರಬೇತಿ ನೀಡುವುದೇ ಇದರ ಗುರಿಯಾಗಿದೆ. ಈ ಪ್ರಾಜೆಕ್ಟ್‌ನಿಂದಾಗಿ ಭಾರತದ 3 ಲಕ್ಷಕ್ಕಿಂತ ಹೆಚ್ಚಿನ ಹೆಂಗಸರಿಗೆ, ಸೈಬರ್ ಸುರಕ್ಷತೆಯ ಸಲಹೆ ಮತ್ತು ಉಪಾಯಗಳು, ದೂರು ನೀಡುವ ಮತ್ತು ಪರಿಹಾರ ಪಡೆಯಬಹುದಾದ ದಾರಿಗಳು, ಡೇಟಾ ಗೌಪ್ಯತೆ ಮತ್ತು ತಮ್ಮ ಲಾಭಕ್ಕಾಗಿ ತಂತ್ರಜ್ಞಾನದ ಬಳಕೆಯ ಬಗ್ಗೆ ತಿಳಿವಳಿಕೆ ಮೂಡಿದೆ. ಗೃಹಿಣಿಯರೂ ಅಲ್ಲದೆ, ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಹತ್ತು ಲಕ್ಷ ಮಹಿಳೆಯರಿಗೆ ತರಬೇತಿ ನೀಡುವ ಗುರಿಯನ್ನು ಈ ಆವೃತ್ತಿ ಹೊಂದಿದೆ.

## ಜಾಗತಿಕವಾಗಿ 3 ವರ್ಷಗಳಲ್ಲಿ ನಾಲ್ಕರಲ್ಲಿ ಒಂದು ಸಂಸ್ಥೆಯು ಡೇಟಾ ಸೋರಿಕೆಗೆ ಒಳಗಾಗಿದೆ

ನವೆಂಬರ್‌ನಲ್ಲಿ ಬಿಡುಗಡೆಯಾದ PwC ವರದಿ ಪ್ರಕಾರ, ಕಳೆದ ಮೂರು ವರ್ಷಗಳಲ್ಲಿ ಜಗತ್ತಿನ ಪ್ರತಿ ನಾಲ್ಕರಲ್ಲಿ ಒಂದು ಸಂಸ್ಥೆಯು ಡೇಟಾ ಸೋರಿಕೆಯಿಂದಾಗಿ 20 ಮಿಲಿಯನ್ ಡಾಲರ್‌ಗಿಂತ ಹೆಚ್ಚಿನ ನಷ್ಟಕ್ಕೆ ಒಳಗಾಗಿದೆ. . ಈ ವರದಿಯ ಪ್ರಕಾರ, 2023 ರಲ್ಲಿ ಹೆಚ್ಚಾಗಬಹುದಾದ ಸೈಬರ್ ಅಪಾಯಗಳ ಬಗ್ಗೆ ಜಗತ್ತಿನ ಉದ್ದಗಲಕ್ಕೂ ಇರುವ ಸಂಸ್ಥೆಗಳು ಕಳವಳಗೊಂಡಿವೆ. ಜೊತೆಗೆ, 2022 ಕ್ಕೆ ಹೋಲಿಸಿದರೆ 2023 ರಲ್ಲಿ ಸೈಬರ್ ಅಪರಾಧಿಗಳು ತಮ್ಮ ಸಂಸ್ಥೆಗಳಿಗೆ ಹೆಚ್ಚು ಕೆಡುಕನ್ನು ಉಂಟುಮಾಡುತ್ತಾರೆ ಎಂದು ಸರ್ವೇಗೆ ಒಳಗಾದ 65% ಗಿಂತ ಹೆಚ್ಚಿನ ಬಿಸಿನೆಸ್ ಎಕ್ಸಿಕ್ಯೂಟಿವ್‌ಗಳು ನಂಬಿದ್ದಾರೆ.

## UPI ಬಳಕೆ ಹೆಚ್ಚುತ್ತಿರುವಂತೆ ಅದರಲ್ಲಿನ ಮೋಸಗಳೂ ಹೆಚ್ಚುತ್ತಿವೆ ಎಂದ ಎಮ್‌ಎಚ್‌ಎ

ಗೃಹ ವ್ಯವಹಾರಗಳ ಸಚಿವಾಲಯದ ಡೇಟಾ ಪ್ರಕಾರ , ರಾಷ್ಟ್ರೀಯ ಸೈಬರ್ ಅಪರಾಧ ದೂರು ಪೋರ್ಟಲ್ (NCRP) ನಲ್ಲಿ UPI ಗೆ ಸಂಬಂಧಿಸಿದಮೋಸಗಳು ದಾಖಲಾಗುವುದು ತುಂಬ ಏರಿಕೆ ಕಂಡಿದೆ. 2022 ರ ಮೊದಲ ಮತ್ತು ಎರಡನೇ ಮೂರು ತಿಂಗಳಿನಲ್ಲಿ, ಸೈಬರ್ ಮೋಸದ ವರದಿಗಳಲ್ಲಿ 15.3 ಪ ರ್ಸೆಂಟ್ ಹೆಚ್ಚಳವಾಗಿತ್ತು. ಆರ್‌ಬಿಐ ಹೇಳುವಂತೆ, ಸೆಪ್ಟೆಂಬರ್‌ನಲ್ಲಿ ಕೊನೆಗೊಂಡ ಹಣಕಾಸು ವರ್ಷದ ಹೊತ್ತಿಗೆ UPI ಪಾವತಿಗಳು 1200% ನಷ್ಟು ಹೆಚ್ಚಾಗಿದ್ದವು.

## AIIMS ದೆಹಲಿ ಸರ್ವರ್ ಡೌನ್; ರ್‍ಯಾನ್ಸಮ್‌ವೇರ್ ದಾಳಿ ಶಂಕೆ

ಭಾರತದ ಮುಂಚೂಣಿಯ ವೈದ್ಯಕೀಯ ಸಂಸ್ಥೆಯಾದ ಏಐಐಎಮ್‌ಎಸ್ ಪ್ರಮುಖ ಸೈಬರ್‌ದಾಳಿಗೆ ತುತ್ತಾಗಿದೆ. ಕೇಂದ್ರ ಸೈಬರ್ ಏಜೆನ್ಸಿಗಳು ಮತ್ತು ಇತರ ತನಿಖಾ ಸಂಸ್ಥೆಗಳು ದಾಳಿಯ ಮೂಲಕ್ಕಾಗಿ ಹುಡುಕಾಡುತ್ತಿವೆ. ಏಐಐಎಮ್‌ಎಸ್‌ನಲ್ಲಿನ ನ್ಯಾಶನಲ್ ಇನ್‌ಫರ್ಮ್ಯಾಟಿಕ್ಸ್ ಸೆಂಟರ್‌ನ ತಂಡಹೇಳುವಂತೆ, ಇದು ರ್‍ಯಾನ್ಸಮ್‌ವೇರ್ ದಾಳಿಯಾಗಿರಬಹುದು. ಇದರ ಬಗ್ಗೆ ಈಗಾಗಲೇ ವರದಿಯಾಗಿದ್ದು, ಕಾನೂನು ಜಾರಿ ಏಜೆನ್ಸಿಗಳು ಸೂಕ್ತ ಕ್ರಮಕೈಗೊಳ್ಳಲಿವೆ ಎಂದೂ ಆ ತಂಡದವರು ಹೇಳಿದ್ದಾರೆ.

## ಸಾವಿರಾರು ಆಂಡ್ರಾಯ್ಡ್ ಫೈಲ್ ಮ್ಯಾನೇಜರ್ ಆಪ್‌ಗಳಿಗೆ ತಗಲಿದ ಶಾರ್ಕ್‌ಬಾಟ್ ಮಾಲ್‌ವೇರ್ ಸೋಂಕು

ಸುರಕ್ಷಿತ ಫೈಲ್ ಮ್ಯಾನೇಜರ್ ಆಪ್‌ಗಳ ಸೋಗಿನಲ್ಲಿ ಹಲವು ಹೊಸ ಅಪಾಯಕಾರಿ ಆಂಡ್ರಾಯ್ಡ್ ಆಪ್‌ಗಳು ಅಧಿಕೃತ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ನುಸುಳಿದ್ದು, ಬಳಕೆದಾರರ ಫೋನಿಗೆ ಶಾರ್ಕ್‌ಬಾಟ್ ಬ್ಯಾಂಕಿಂಗ್ ಟ್ರೋಜನ್ ವೈರಸ್ ತಗಲಿಸಿವೆ.

ಫೈಲ್ ಮ್ಯಾನೇಜರ್‌ಗಳ ಸೋಗಿನಲ್ಲಿದ್ದ ಈ ಹೊಸ ಆಂಡ್ರಾಯ್ಡ್ ಟ್ರೋಜನ್ ಆಪ್‌ಗಳನ್ನು ಬಿಟ್‌ಡಿಫೆಂಡರ್ ಅನಲಿಸ್ಟ್‌ಗಳು ಕಂಡುಹಿಡಿದು, ಗೂಗಲ್‌ಗೆ ವರದಿ ಮಾಡಿದ್ದಾರೆ. ಇದರ ಬಳಿಕ ಗೂಗಲ್ ಪ್ಲೇ ಸ್ಟೋರ್‌ನಿಂದ ಅವುಗಳನ್ನು ಅಳಿಸಿಹಾಕಲಾಗಿದೆ. ಆದರೆ, ಇದಕ್ಕೂ ಮೊದಲೇ ಇಂತಹ ಆಪ್‌ಗಳನ್ನು ಡೌನ್‌ಲೋಡ್ ಮಾಡಿದವರ ಫೋನಿನಲ್ಲಿ ಅವು ಇನ್ನೂ ಇರಬಹುದು.



## ಆನ್‌ಲೈನ್ ಕೆಲಸದ ಮೋಸ: ಜಾರಿ ನಿರ್ದೇಶನಾಲಯ ಕರ್ನಾಟಕದಲ್ಲಿನ 80 ಬ್ಯಾಂಕ್ ಖಾತೆಗಳನ್ನು ತಡೆಹಿಡಿದಿದೆ

ಜಾರಿ ನಿರ್ದೇಶನಾಲಯವು (ED) 'ಸೂಪರ್ ಲೈಕ್ ಅರ್ನಿಂಗ್ ಅಪ್ಲಿಕೇಶನ್' ಎಂಬ ಬಿಡುವಿನ ವೇಳೆಯಲ್ಲಿ ಮಾಡಬಹುದಾದ ಆನ್‌ಲೈನ್ಕೆಲಸದ ಮೋಸ ಪ್ರಕರಣದ ತನ್ನ ಮುಂದುವರಿದ ತನಿಖೆಯ ಭಾಗವಾಗಿ ಒಟ್ಟು 1 ಕೋಟಿ ರೂಪಾಯಿ ಬೆಲೆಯ 80 ಬ್ಯಾಂಕ್ ಖಾತೆಗಳನ್ನುತಡೆಹಿಡಿದಿದೆ.

ಬಳಕೆದಾರರು ಹಣ ಹೂಡಿಕೆ ಮಾಡುವುದು ಮತ್ತು ಹೆಸರಾಂತ ವ್ಯಕ್ತಿಗಳ ಫೋಟೊ ಮತ್ತು ವಿಡಿಯೊಗಳನ್ನು ಹಂಚಿಕೊಳ್ಳುವ ಕೆಲಸವನ್ನು ಈಮೋಸ ಒಳಗೊಂಡಿತ್ತು. ಆಮೇಲೆ ಅವರು ಲಾಭದ ಹೆಸರಿನಲ್ಲಿ ಹಣ ಪಡೆಯುತ್ತಿದ್ದರು. ಮೊದಮೊದಲು ಬಳಕೆದಾರರು ಹಣಪಡೆಯುತ್ತಿದ್ದರು. ಆದರೆ, ಕೊನೆಗೊಂದು ದಿನ ಅವರಿಗೆ ಹಣ ಬರುವುದು ನಿಂತುಹೋಯಿತು. ಅವರು ತಮ್ಮ ಹೂಡಿಕೆಯ ಹಣ ಮರಳಿಪಡೆಯುವುದನ್ನು ಕೂಡ ಆಪ್ ತಡೆಹಿಡಿಯಿತು.

## 33,000 ಕ್ಕಿಂತ ಹೆಚ್ಚಿನ ಕಣ್ಣೂರ್ ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿ ಹ್ಯಾಕರ್‌ಗಳ ಫೋರಮ್‌ನಲ್ಲಿ ದೊರೆಯುತ್ತದೆ

ಗುರುತರವಾದ ಡೇಟಾ ಸೋರಿಕೆಯೊಂದರಲ್ಲಿ, 33,000 ಕ್ಕಿಂತ ಹೆಚ್ಚಿನ ಕಣ್ಣೂರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮಾಹಿತಿ ಮಿಂಬಲೆಯಲ್ಲಿಹರಿದಾಡುತ್ತಿದೆ. '3Subs' ಎಂಬ ಹೆಸರಿಟ್ಟುಕೊಂಡ ಮಿಂಗಳ್ಳನೊಬ್ಬ 2018 ರಿಂದ 2022 ರವರೆಗಿನ ಕಣ್ಣೂರ್ ವಿಶ್ವವಿದ್ಯಾಲಯದ ದಾಖಲೆಗಳನ್ನುಕೂಡಿಟ್ಟುಕೊಂಡಿದ್ದ 5 ಡೇಟಾಬೇಸ್‌ಗಳನ್ನು ಸೋರಿಕೆ ಮಾಡಿದ್ದಾನೆ. ಹೆಸರು, ಅಪ್ಲಿಕೇಶನ್ ನಂಬರ್, ಇಮೇಲ್, ಪಾಸ್‌ವರ್ಡ್, ಆಧಾರ್ ನಂಬರ್, ಫೋನ್ ನಂಬರ್, ದಾಖಲಾತಿ ವಿವರಗಳು ಮತ್ತು ತೇರ್ಗಡೆಯಾದ ವರ್ಷದ ವಿವರ ಬಯಲಾದ ಡೇಟಾದಲ್ಲಿ ಸೇರಿದೆ.

## NCW launched the latest version of the Digital Shakti programme, designed to make women digitally skilled

In November, the National Commission for Women (NCW) released the 4.0 version of its 'Digital Shakti' programme, designed to teach women how to be safe online. The Digital Shakti initiative was launched in 2018 with the goal of training women to combat cybercrime. This project has made over 3 lakh women in India aware of cyber safety tips and tactics, reporting and redressal channels, data privacy, and the use of technology for their benefit. Apart from housewives, the version seeks to train one million women from schools, colleges, and universities.

## One in four firms suffered a data breach in 3 years globally

According to a PwC report released in November, one in every four organizations in the world has experienced a data breach that cost $20 million or more in the last three years. According to the report, organizations around the globe are concerned about increasing risks and cyber incidents in 2023, and over 65% of surveyed business executives believe cybercriminals will significantly impact their organizations in 2023 compared to 2022.

## Massive spike in UPI scams amid the increase in usage says MHA

According to Ministry of Home Affairs data, there has been a considerable increase in cyber fraud reports concerning UPI frauds made on the National Cyber Crime Reporting Portal (NCRP). Between the first and second quarters of 2022, there was a 15.3 percent increase in cyber fraud reports. According to the RBI, UPI payments increased by 1200% in the fiscal year ending September.

## AIIMS Delhi Server Down; Ransomware Attack Suspected

AIIMS, India's foremost medical institute in Delhi, has been hit by a major cyberattack. Central cyber agencies and other intelligence units are seeking to identify the source. According to the National Informatics Centre's team at AIIMS, this could be a ransomware attack that has been reported and will be examined by appropriate law enforcement agencies.

## Sharkbot malware infects thousands of Android file manager apps

A new set of malicious Android apps masquerading as harmless file managers reportedly entered the official Google Play app store, infecting users with the Sharkbot banking trojan.

Bitdefender analysts found the new Android trojan apps disguised as file managers and reported them to Google in a new report. They've all subsequently been deleted from the Google Play Store. However, many individuals who previously downloaded them may still have them installed on their phones or be infected with undetected malware.



## Online job scam: Enforcement Directorate freezes 80 bank accounts in Karnataka

The Directorate of Enforcement (ED) has frozen 80 bank accounts with a total value of Rs 1 crore as part of its continuing investigation into a case involving the 'Super Like Earning Application,' a scam promising part-time online work.

The scam involved users investing money and sharing photos and videos of celebrities. They would subsequently receive money as profits. The users did receive money initially. However, they eventually stopped receiving incentives. The app blocked their withdrawal when they attempted to withdraw their investment funds.

## Over 33,000 Kannur students' personal information available on hackers' forum

In a significant data breach, information on over 33,000 Kannur University students was discovered on a dark web portal. A hacker known as '3Subs' leaked five databases holding 33,040 Kannur University records from 2018 to 2022. Name, application number, email, password, Aadhar number, phone number, admission details, and pass year are among the data that have been exposed.

# ಆನ್‌ಲೈನ್ ಮೋಸಗಳು

## ಓಲಾ ಸ್ಕೂಟರ್ ಮೋಸ: ಪ್ಯಾನ್-ಇಂಡಿಯಾ ಯೋಜನೆಯಲ್ಲಿ 1,000 ಕ್ಕಿಂತ ಹೆಚ್ಚಿನ ಮಂದಿಗೆ ಕೋಟಿಗಟ್ಟಲೆ ಮೋಸ ಮಾಡಿದ್ದಕ್ಕಾಗಿ 16 ಮಂದಿ ಸೆರೆ

ಓಲಾ ಸ್ಕೂಟರ್ ಮೋಸದಲ್ಲಿ 1,000 ಕ್ಕಿಂತ ಹೆಚ್ಚಿನ ಮಂದಿಗೆ ಕೋಟಿಗಟ್ಟಲೆ ಹಣ ಮೋಸ ಮಾಡಿದ್ದಕ್ಕಾಗಿ ಬೆಂಗಳೂರು, ಹರಿಯಾಣದ ಗುರುಗ್ರಾಮ ಮತ್ತು ಬಿಹಾರದ ಪಾಟ್ನ ಸೇರಿದಂತೆ ದೇಶದುದ್ದಕ್ಕೂ 16 ಮಂದಿಯನ್ನು ಸೆರೆಹಿಡಿಯಲಾಗಿದೆ. ಈ ಮೋಸಗಾರರು ಓಲಾ ಎಲೆಕ್ಟ್ರಿಕ್ ಸ್ಕೂಟರ್‌ಗಳಿಗಾಗಿ ನಕಲಿ ವೆಬ್‌ಸೈಟ್ ಅನ್ನು ಡಿಸೈನ್ ಮಾಡಿದ್ದರು.

## 360 ರೂಪಾಯಿಗೆ ಬಿಯರ್ ಆರ್ಡರ್ ಮಾಡುವಾಗ, ವಾಟ್ಸಾಪ್ ಮೋಸದಲ್ಲಿ 44,782 ರೂಪಾಯಿ ಕಳೆದುಕೊಂಡ ವ್ಯಕ್ತಿ

ಮೋಸಹೋದವರು ತಮ್ಮ ಮನೆಬಾಗಿಲಿಗೆ ಮದ್ಯ ತಲುಪಿಸುವ ಹತ್ತಿರದ ವೈನ್ ಅಂಗಡಿಗಾಗಿ ಹುಡುಕುತ್ತಿದ್ದರು. ಸ್ವಲ್ಪ ಹೊತ್ತಿನ ಬಳಿಕ, ತಾನು ವೈನ್ ಅಂಗಡಿ ಒಡೆಯ ಎಂದು ಹೇಳಿಕೊಂಡ ಮೋಸಗಾರನ ಸಂದೇಶ ಅವರಿಗೆ ಬಂದಿತು. ಆನ್‌ಲೈನ್ ವಾಟ್ಸಾಪ್ ಮೋಸದಲ್ಲಿ ಈ 24 ರ ಹರೆಯದ ವಕೀಲರು ₹ 44,782 ಕಳೆದುಕೊಂಡರು.

## ಐಎಎಸ್ ಅಧಿಕಾರಿಯ ಸೋಗಿನಲ್ಲಿ ಒಬ್ಬ ಮಹಿಳೆಯಿಂದ ಮೋಸಹೋದ ಕರ್ನಾಟಕದ ವ್ಯಕ್ತಿ

ಡೆಪ್ಯೂಟಿ ಕಮೀಶನರ್ ಎಂಬ ಸೋಗಿನಲ್ಲಿದ್ದ ಮಹಿಳೆ ಒಬ್ಬ ವ್ಯಕ್ತಿಗೆ ಆನ್‌ಲೈನ್‌ನಲ್ಲಿ ಮೋಸ ಮಾಡಿದ್ದಾಳೆ. . ಆತನನ್ನು ಮದುವೆ ಆಗುವುದಾಗಿ ನಂಬಿಸಿ ಅವನಿಂದ ಆಕೆ ₹ 40 ಲಕ್ಷ ದೋಚಿದಳು.

## ಐ.ಟಿ. ಕೆಲಸದ ಮೋಸ: ಆರೋಪಿಗೆ ₹ 2-3 ಲಕ್ಷ ಪಾವತಿಸಿದ ಒಂಬತ್ತು ಮಂದಿ ಪಾಪದವರು

ಒಂಬತ್ತು ಮಂದಿಗೆ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿದ ಆರೋಪಿ ಮಹಿಳೆ ಅವರಿಂದ 2 ರಿಂದ 3 ಲಕ್ಷದವರೆಗೆ ಹಣಕಲೆಹಾಕಿದ್ದಾಳೆ. ಲಕ್ನವ್‌ನಲ್ಲಿನ ಆದಾಯ ತೆರಿಗೆ ಇಲಾಖೆ ಮುಖ್ಯ ಕಚೇರಿಯ ಒಳಗಿಂದಲೇ ಆಕೆ ಕೆಲಸಕ್ಕಾಗಿ ಸಂದರ್ಶನಗಳನ್ನು ನಡೆಸುತ್ತಿದ್ದಾಗ ಆಕೆಯನ್ನು ಸೆರೆಹಿಡಿಯಲಾಯಿತು. ಕಡಿಮೆ ಅಂದರೂ ಒಂಬತ್ತು ಮಂದಿಗೆ ಆಕೆ ನಕಲಿ ಅಪಾಯಿಂಟ್‌ಮೆಂಟ್ ಲೆಟರ್‌ಗಳನ್ನು ಕೊಟ್ಟಿದ್ದಳು.

## KYC ಮೋಸದಲ್ಲಿ ₹ 2.26 ಲಕ್ಷ ಕಳೆದುಕೊಂಡ ಅಧಿಕಾರಿ

ಸಾರ್ವಜನಿಕ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರಿಗೆ ₹ 2.26 ಲಕ್ಷ ಮೋಸವಾಗಿರುವ ಆರೋಪ ಕೇಳಿಬಂದಿದೆ. ಅವರ ಮಿಂಚೆಯಲ್ಲಿ(ಇಮೇಲ್) ಬಂದ ಕೊಂಡಿಯನ್ನು ಕ್ಲಿಕ್ ಮಾಡಿ ವೈಯಕ್ತಿಕ ಮಾಹಿತಿ ಅಪ್‌ಡೇಟ್ ಮಾಡದೆ ಇದ್ದರೆ ಅವರ ಬ್ಯಾಂಕ್ ಖಾತೆಯನ್ನುತಡೆಹಿಡಿಯಲಾಗುವುದು ಎಂದು ಅವರಿಗೆ ಸಂದೇಶ ಬಂದಿತ್ತು.




## ₹ 1.2 ಕೋಟಿ ಮೋಸಕ್ಕೆ ಒಳಗಾದ ನಿವೃತ್ತ ಐಎಎಫ್ ಅಧಿಕಾರಿ

ಲಿತಿಯಮ್ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಬರುವುದೆಂದು ನಂಬಿಸಿದ ಸೈಬರ್ ಕಳ್ಳರು 68 ರ ಹರೆಯದ ವಾಯುಪಡೆಯ ನಿವೃತ್ತ ಅಧಿಕಾರಿಯೊಬ್ಬರಿಗೆ 1.2 ಕೋಟಿ ರೂಪಾಯಿಗಳ ಮೋಸ ಮಾಡಿದ ಆರೋಪವಿದೆ. ಕಳೆದ ತಿಂಗಳು ತಮಗೆ ಬಂದ ವಾಟ್ಸಾಪ್ ಸಂದೇಶದಲ್ಲಿ ಈ ವ್ಯಾಪಾರದ ಬಗೆಗಿನಹೂಡಿಕೆಯ ಮಾಹಿತಿ ಇತ್ತು ಎಂದು ಆ ನಿವೃತ್ತ ಅಧಿಕಾರಿ ಹೇಳಿದ್ದಾರೆ.

## ಪಾರ್ಟ್-ಟೈಮ್ ಕೆಲಸದ ಮೋಸದಲ್ಲಿ ₹ 8 ಲಕ್ಷ ಕಳೆದುಕೊಂಡ ಹಡಗುಪಡೆಯ ಹಡಗಾಳು

ಮೋಸಹೋದವರು ಹೇಳುವಂತೆ, ಯಾವುದೋ "ಲಜಾಡ" ಎಂಬ ಪ್ರಾಜೆಕ್ಟ್‌ನ ಜನರಲ್ ಮ್ಯಾನೇಜರ್ ಒಬ್ಬರಿಂದ ಅವರಿಗೆ ವಾಟ್ಸಾಪ್ ಸಂದೇಶಬಂದಿತಂತೆ. ಕಂಪನಿಯು ಪಾರ್ಟ್-ಟೈಮ್ ಕೆಲಸದವರ ತಂಡವನ್ನು ಕಟ್ಟುತ್ತಿತ್ತು. ಮನೆಯಿಂದ ಕೆಲಸ ಮಾಡಲು ಯಾರು ಬೇಕಾದರೂ ತಂಡವನ್ನುಸೇರಬಹುದಾಗಿತ್ತು ಮತ್ತು ತಿಂಗಳಿಗೆ 8000 ದಿಂದ 20000 ಸಂಬಳ ಪಡೆಯಬಹುದಿತ್ತು.

## ಡಾಕ್ಟರ್ ಅಪಾಯಿಂಟ್‌ಮೆಂಟ್‌ಗಾಗಿ ಆನ್‌ಲೈನ್ ಪಾವತಿ ವೇಳೆ ₹ 2.18 ಲಕ್ಷ ಕಳೆದುಕೊಂಡ ಮಹಿಳೆ

ಮಹಿಳೆಯೊಬ್ಬರು ಆನ್‌ಲೈನ್‌ನಲ್ಲಿ ಡಾಕ್ಟರ್ ಅಪಾಯಿಂಟ್‌ಮೆಂಟ್ ಕಾದಿರಿಸುವಾಗ, ಆಸ್ಪತ್ರೆ ಸಿಬ್ಬಂದಿಯ ಸೋಗಿನಲ್ಲಿ ವ್ಯಕ್ತಿಯೊಬ್ಬ ಆಕೆಯಿಂದ ₹ 2 ಲಕ್ಷಕ್ಕಿಂತ ಹೆಚ್ಚಿನ ಹಣ ದೋಚಿದ್ದಾನೆ. ಕನ್ಸಲ್ಟೇಶನ್ ವೆಚ್ಚವನ್ನು ಆನ್‌ಲೈನ್ ಮೂಲಕವೇ ಕಟ್ಟಬೇಕೆಂದು ಕೋರಿದ ಆರೋಪಿಯು ಆಕೆಗೆ ಒಂದು ಪಾವತಿ ಕೊಂಡಿಯನ್ನು ಕಳುಹಿಸಿದ್ದಾನೆ. ಆಕೆ ಪಾವತಿ ಮಾಡಲು ನೋಡಿದೊಡನೆ, ಆಕೆಯ ಖಾತೆಯಿಂದ 2.18 ಲಕ್ಷ ರೂಪಾಯಿ ಕಳುವಾಯಿತು.

# ONLINE FRAUDS

## Ola scooter scam: 16 arrested for defrauding over 1,000 crores in pan-India scheme

Sixteen people have been arrested across the country, including in Karnataka's Bengaluru, Haryana's Gurugram, and Bihar's Patna, for deceiving over 1,000 people out of crores of rupees in the Ola scooter scam. The fraudsters had designed a fake website for Ola electric scooters.

## Man loses Rs 44,782 in a WhatsApp scam while attempting to order beer at Rs 360

The victim looked for nearby wine shops that delivered liquor to his house. After a while, he received a reply from the scammer posing as the owner of a wine shop. The 24-year-old lawyer lost ₹ 44, 782 in an online WhatsApp scam.

## Man from Karnataka tricked by lady posing as IAS officer

A man was duped online by a lady impersonating a deputy commissioner. The woman also allegedly offered to marry the man and collected ₹ 40 lakh from him.

## I.T. job fraud: Nine hopefuls paid ₹ 2-3 lakh each to the accused

The accused woman collected between 2 and 3 lakh rupees from every nine people after promising them jobs in government departments. The woman who was allegedly arrested conducting job interviews from within the Income Tax Department headquarters in Lucknow had given at least nine people false appointment letters.

## Official loses ₹ 2.26 lakh to KYC fraud

A senior officer in the public health department was allegedly duped out of ₹ 2.26 lakh after receiving a message that his bank account would be blocked if personal information on a link emailed to him was not updated.




## IAF retired officer defrauded of ₹ 1.2 million

A 68-year-old retired air force man was allegedly duped out of ₹ 1.2 crores by cyber thieves who promised him significant returns in the lithium trade. The retired officer stated that he received a WhatsApp message about trade investment last month, which interested him.

## Navy sailor loses ₹8 lakh as a result of part-time job fraud

According to the victim, he received a WhatsApp message from the "general manager" of one "Lazada Project. The company was forming a part-time workforce. Anyone can join the team to work from home and earn a monthly pay ranging from ₹8,000 and ₹20,000 per month.

## Woman scammed out of ₹ 2.18 lakh when attempting to pay for a doctor's appointment online

While trying to schedule an online doctor's appointment, a woman was conned out of more than ₹ 2 lakh by a fraudster acting as hospital staff. The accused requested that the woman pay the consultation cost online using a payment link. Her account was debited by 2.18 lakh as she attempted to make the payment.

# ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣೆ ಮಸೂದೆ 2022 ರ ಕರಡನ್ನು ಹೊರಪಡಿಸಿದ ಭಾರತ ಸರ್ಕಾರ

ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಸಾರ್ವಜನಿಕ ಸಮಾಲೋಚನೆಗಾಗಿ ತಿದ್ದುಪಡಿಯಾದ ವೈಯಕ್ತಿಕ ಡೇಟಾ ಸಂರಕ್ಷಣೆ ಮಸೂದೆ, 2022 ರ ಕರಡನ್ನು ಪ್ರಕಟಿಸಿದೆ. ಕರಡು ಮಸೂದೆಯು ಕಿರು ವಿವರದೊಂದಿಗೆ ಸಚಿವಾಲಯದ ಮಿಂದಾಣದಲ್ಲಿ ದೊರೆಯುತ್ತದೆ.
ವಿವಿಧ ಷರತ್ತುಗಳನ್ನು ಜನ ಅರ್ಥಮಾಡಿಕೊಳ್ಳಲು ಸುಲಭವಾಗುವಂತೆ ಈ ಮಸೂದೆಯು ಸರಳ ಭಾಷೆಯಲ್ಲಿದೆ. ಮಸೂದೆಯಲ್ಲಿ ಹಲವುಉದಾಹರಣೆಗಳನ್ನು ನೀಡಲಾಗಿದ್ದು, ನಿಜ ಜೀವನದ ಸನ್ನಿವೇಶಗಳೊಂದಿಗೆ ಷರತ್ತುಗಳನ್ನು ಸುಲಭವಾಗಿ ತಾಳೆಮಾಡಬಹುದು.
ಸಾಮಾಜಿಕ ಮಿಂದಾಣಗಳು, ಆನ್‌ಲೈನ್ ಸೇವೆಗಳು, ಆರೋಗ್ಯ ಪೂರೈಕೆದಾರರು ಮುಂತಾದ ಬಗೆಬಗೆಯ ಸೇವೆ ಒದಗಿಸುವವರೊಂದಿಗೆ ನಾವುಹಂಚಿಕೊಳ್ಳುವ ಡಿಜಿಟಲ್ ಮಾಹಿತಿ ಹೆಚ್ಚುತ್ತಲೇ ಇದೆ. ಡಿಜಿಟಲ್ ರೂಪದಲ್ಲಿರುವಾಗ, ಅಂತಹ ಮಾಹಿತಿಯು ದೊಡ್ಡ ಪ್ರಮಾಣದ ದುರುಪಯೋಗಕ್ಕೆ ಕಾರಣವಾಗಿದೆ. ಆದ್ದರಿಂದ ಗ್ರಾಹಕರ ವೈಯಕ್ತಿಕ ಡೇಟಾದ ತಪ್ಪಾದ ಬಳಕೆಯಿಂದ ಅವರನ್ನು ಕಾಪಾಡಬೇಕಿದೆ. ಈ ಹಿನ್ನೆಲೆಯಲ್ಲಿ ಈ ಮಸೂದೆಯು ಮೊದಲೇ ಜಾರಿಗೆ ಬರಬೇಕಿತ್ತು.
ಮಸೂದೆಯ ಮುಖ್ಯಾಂಶಗಳು:

- ನಿಮ್ಮ ವೈಯಕ್ತಿಕ ಡೇಟಾವನ್ನು ಯಾರೊಂದಿಗೆ ಹಂಚಿಕೊಳ್ಳುತ್ತೀರೊ ಇಲ್ಲವೇ ನಿಮ್ಮ ಡೇಟಾವನ್ನು ಯಾರು ಪ್ರಕ್ರಿಯೆಗೊಳಿಸುತ್ತಾರೊ, ಅವರುನಿ ರ್ದಿಷ್ಟ ಉದ್ದೇಶಗಳಿಗಾಗಿ ಮಾತ್ರ ಡೇಟಾವನ್ನು ಬಳಸಬೇಕೆಂದು ಇದು ಕಡ್ಡಾಯಗೊಳಿಸುತ್ತದೆ.
- ಡೇಟಾ ಅವರ ಹಿಡಿತದಲ್ಲಿರುವಾಗ ಡೇಟಾವನ್ನು ಕಾಪಾಡಲು ಅವರ ಮೇಲೆ ಕಟ್ಟುಪಾಡುಗಳನ್ನು ಹಾಕುತ್ತದೆ.
- ಡೇಟಾವನ್ನು ತಪ್ಪಾಗಿ ಬಳಸಿದರೆ ಇಲ್ಲವೇ ಸರಿಯಾಗಿ ಕಾಪಾಡದಿದ್ದರೆ ಅವರಿಗೆ ದಂಡ ಹಾಕಲಾಗುವುದು.
- ಒಂದು ವೇಳೆ ಡೇಟಾ ಸೋರಿಕೆಯಾದರೆ, ಅದರ ಬಗ್ಗೆ ತಿಳಿಯುವ ಹಕ್ಕು ನಿಮಗಿರುತ್ತದೆ.
- ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿರುವ ಮತ್ತು ಮಸೂದೆಯ ನಿಯಮಗಳ ಪಾಲನೆಯಾಗುವಂತೆ ನೋಡಿಕೊಳ್ಳುವ ಭಾರತೀಯ ಡೇಟಾ ಸಂರಕ್ಷಣೆ ಮಂಡಳಿಯೊಂದರ ಸ್ಥಾಪನೆಯನ್ನು ಮಸೂದೆ ಪ್ರಸ್ತಾಪಿಸುತ್ತದೆ.

2022 ರ ಡಿಸೆಂಬರ್ 17 ರ ಒಳಗೆ ಕರಡು ಮಸೂದೆಗೆ ಸಾರ್ವಜನಿಕರು ತಮ್ಮ ಅನಿಸಿಕೆಗಳನ್ನು ಕೆಳಗಿನ ಕೊಂಡಿ ಬಳಸಿ ತಿಳಿಸಬಹುದು https://innovateindia.mygov.in/digital-data-protection/.

**-ಕಾರ್ತಿಕ್ ರಾವ್ ಬಪ್ಪನಾಡ್**
ಸೆಂಟರ್ ಮುಖ್ಯಸ್ಥ,
CySecK

# Indian Government Publishes Draft of Digital Personal Data Protection Bill 2022

Ministry of Electronics and Information Technology, Government of India, has published a draft of the revised Digital Personal Data Protection Bill, 2022 for public consultation. The draft bill, along with a brief explanatory note, is available on the ministry website. This Bill adopts plain and simple language to make it easy for people to understand the various clauses. It also provides several illustrations throughout that will make it easy to relate the clauses to real-life scenarios.

The volume of digital information that we share with various service providers – social media platforms, online services, health providers, etc – is increasing exponentially. When in digital format, such information is liable for large scale misuse. It is hence important that consumers are protected from the misuse of their personal data. In this context, the bill is overdue.

**The key highlights of the bill are:**

- It mandates that those with who you share personal data or those who process the data use the data only for the specific purposes.
- It also imposes obligations on them to secure the data when in their control.
- It specifies penalty in case of misuse of data, or if the data is not reasonably secured.
- In case of a data breach, you would have a right to be informed.
- The Bill proposes establishment of Data Protection Board of India that has the powers of a Civil Court and will ensure compliance to the provisions of the Bill.

Public are welcome to provide feedback to the draft Bill by 17-Dec-2022 at https://innovateindia.mygov.in/digital-data-protection/.

-**Karthik Rao Bappanad**
Centre Head, CySecK

# ಜಾಗೃತಿ ಇನ್ಫೋಗ್ರಾಫಿಕ್ಸ್

# ಅಂತರಾಷ್ಟ್ರೀಯ ಕಂಪ್ಯೂಟರ್ ಭದ್ರತಾ ದಿನ



ಪ್ರತಿ ವರ್ಷ **ನವೆಂಬರ್ 30** ರಂದು ಪ್ರಪಂಚದಾದ್ಯಂತ **ಅಂತರಾಷ್ಟ್ರೀಯ ಕಂಪ್ಯೂಟರ್ ಭದ್ರತಾ ದಿನವನ್ನಾಗಿ** ಆಚರಿಸಲಾಗುತ್ತದೆ. ಕಂಪ್ಯೂಟರ್ ಭದ್ರತಾ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಲು ಹಾಗೂ ಪ್ರತಿಯೊಬ್ಬರೂ ತಮ್ಮ ಕಂಪ್ಯೂಟರ್‌ಗಳಲ್ಲಿ ಸಂಗ್ರಹಿಸುವ ವೈಯಕ್ತಿಕ ಡೇಟಾ ಕಾಪಾಡುವುದನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ದಿನವನ್ನು ಆಚರಿಸಲಾಗುತ್ತದೆ.

## ಕಂಪ್ಯೂಟರ್ ಭದ್ರತಾ ದಿನದಂದು ಮಾಡಬೇಕಾದ ಐದು ಅಂಶಗಳು

- ನಿಮ್ಮ ಕಂಪ್ಯೂಟರ್‌ಗೆ ಬಲವಾದ ಪಾಸ್‌ವರ್ಡ್‌ಗಳನ್ನು ಬಳಸಿ. ಅಕ್ಷರಗಳು, ಅಂಕಿಗಳು ಮತ್ತು ಚಿಹ್ನೆಗಳಿರುವ ಪಾಸ್‌ವರ್ಡ್‌ಗಳನ್ನು ಹೊಂದಿಸಿ.
- ನೀವು ಮನೆಯಲ್ಲಿ ನಿಮ್ಮ ಸಾಧನವನ್ನು ಹಂಚಿಕೊಳ್ಳುತ್ತಿದ್ದರೆ, ಪ್ರತಿ ಸದಸ್ಯರಿಗೆ ಪ್ರತ್ಯೇಕ ಖಾತೆಯನ್ನು ರಚಿಸಿ.
- ಬಳಕೆಯಲ್ಲಿಲ್ಲದ ಪ್ರೋಗ್ರಾಂ/ಸಾಫ್ಟ್‌ವೇರ್ ಅನ್ನು ತೆಗೆದು ಹಾಕಿ. ನಿಮ್ಮ ಡೇಟಾವನ್ನು ಬ್ಯಾಕಪ್ ಮಾಡಿ ಮತ್ತು ಕನಿಷ್ಠ ವಾರಕ್ಕೊಮ್ಮೆಯಾದರೂ ತಾನಾಗಿಯೇ ಬ್ಯಾಕಪ್ ಆಗುವುದನ್ನು ಸಕ್ರಿಯಗೊಳಿಸಿ.
- ಸೈಬರ್ ಸ್ವಚ್ಛತಾ ಕೇಂದ್ರಕ್ಕೆ (https://www.csk.gov.in/) ಭೇಟಿ ನೀಡಿ. ನಿಮ್ಮ ಕಂಪ್ಯೂಟರ್ ಅನ್ನು ಸ್ಕ್ಯಾನ್ ಮಾಡಿ ಮತ್ತು ನಿಮ್ಮ ಕಂಪ್ಯೂಟರ್‌ನ ಸುರಕ್ಷತೆಯನ್ನು ಹೆಚ್ಚಿಸಿ.

**ಅಂತರಾಷ್ಟ್ರೀಯ ಕಂಪ್ಯೂಟರ್ ಭದ್ರತಾ ದಿನವು, ನಿಮ್ಮ ಸಾಧನಗಳನ್ನು ಸುರಕ್ಷಿತವಾಗಿಡುವಂತೆ ನೆನಪಿಸುವ ದಿನವಾಗಿದೆ.**

# INTERNATIONAL COMPUTER SECURITY DAY



Every year on **November 30**, people worldwide observe **International Computer Security Day**. This day is celebrated to raise public awareness of computer security issues and encourage everyone to protect the personal data they store on their computers.

### Five things to do on Computer Security Day

- Develop stronger passwords for your computer. Use a mixture of letters, numbers, and symbols.
- If you are sharing your device at home, create a separate user account for each member.
- Uninstall programs/software, not in use.
  Back up your data and turn on automatic backup at least weekly once.
- Visit Cyber Swacchta Kendra (https://www.csk.gov.in/ ), scan your computer, and improve the security of your computer.

**INTERNATIONAL COMPUTER SECURITY DAY IS A REMINDER TO PROTECT YOUR DEVICES**

3






- CySecK , in partnership with VMware, held a powerpack mentoring session on 'Go-to-Market strategies.' Mohit Arora, Senior Director- Commercial Business, VMware, India, discussed the market strategies for start-ups. The mentoring session saw participation from enthusiastic entrepreneurs and CXOs.
- CySecK, VMware ಪಾಲುದಾರಿಕೆಯಲ್ಲಿ, 'ಗೋ-ಟು-ಮಾರ್ಕೆಟ್ ತಂತ್ರಗಳು' ಕುರಿತು ಪವರ್‌ಪ್ಯಾಕ್ ಮೆಂಟರಿಂಗ್ ಸೆಶನ್ ನಡೆಸಿತು. VMware, ಭಾರತದ ವಾಣಿಜ್ಯ ವ್ಯವಹಾರದ ಹಿರಿಯ ನಿರ್ದೇಶಕರಾದ ಮೋಹಿತ್ ಅರೋರಾ ಅವರು ಸ್ಟಾರ್ಟ್-ಅಪ್‌ಗಳ ಮಾರುಕಟ್ಟೆತಂತ್ರಗಳ ಕುರಿತು ಚರ್ಚಿಸಿದರು. ಮೆಂಟರಿಂಗ್ ಸೆಶನ್‌ನಲ್ಲಿ ಉತ್ಸಾಹಿ ಉದ್ಯಮಿಗಳು ಮತ್ತು CXO ಗಳು ಪಾಲ್ಗೊಂಡಿದ್ದರು.

9




- CySecK held a webinar with a panel of experts focusing on "Career Opportunities in Cybersecurity for Non-Technical Students." Mr. R Vittal Raj, Risk Assurance and Consulting Expert, Dr. A Nagarathna, Associate Professor, NLSIU, and Ms. Deepa Seshadri, Partner- Deloitte Risk Advisory Practise, were the panelists of the webinar.
- Video link - https://www.youtube.com/watch?v=Qv3EQrlUnz4
- "ತಾಂತ್ರಿಕವಲ್ಲದ ವಿದ್ಯಾರ್ಥಿಗಳಿಗೆ ಸೈಬರ್ ಸುರಕ್ಷತೆಯಲ್ಲಿ ವೃತ್ತಿ ಅವಕಾಶಗಳು" ಎಂಬ ವಿಷಯದ ಮೇಲೆ ಗಮನಹರಿಸಿದ ಪರಿಣತರುಪಾಲ್ಗೊಂಡಿದ್ದ ವೆಬಿನಾರ್ ಅನ್ನು CySecK ಹಮ್ಮಿಕೊಂಡಿತ್ತು. ರಿಸ್ಕ್ ಅಶ್ಯೂರೆನ್ಸ್ ಮತ್ತು ಕನ್ಸಲ್ಟಿಂಗ್ ಪರಿಣತ ಶ್ರೀ ಆರ್ ವಿಟ್ಟಲ್ ರಾಜ್, ಎನ್‌ಎಲ್‌ಎಸ್‌ಐಯುನ ಸಹ ಪ್ರಾಧ್ಯಾಪಕಿ ಡಾ. ಎ ನಾಗರತ್ನ ಮತ್ತು ಡೆಲೋಯಿಟ್ ರಿಸ್ಕ್ ಅಡ್ವೈಸರಿ ಪ್ರಾಕ್ಟೀಸ್ ಪಾಲುದಾರರಾದ ಶ್ರೀಮತಿದೀಪಾ ಶೇಷಾದ್ರಿ ಅವರು ವೆಬಿನಾರ್‌ನಲ್ಲಿ ಪಾಲ್ಗೊಂಡಿದ್ದ ಪರಿಣತರು.
- ವಿಡಿಯೊಗಾಗಿ ಲಿಂಕ್ - https://www.youtube.com/watch?v=Qv3EQrlUnz4

16






- **CySecK at the Bengaluru Tech Summit 2022**
- Team CySecK put up a stall at the Bengaluru Tech summit 2022. The response at the BTS was excellent. Young tech geeks, students, cybersecurity professionals, and other visitors were excited to interact with us. There was a platform provided to the visitors to play exciting games catering to cybersecurity.
- ಬೆಂಗಳೂರು ಟೆಕ್ ಸಮಿಟ್ 2022 ರಲ್ಲಿ CySecK ತಂಡದ ಮಳಿಗೆ ಇತ್ತು. BTS ನಲ್ಲಿ ಪ್ರತಿಕ್ರಿಯೆ ಅತ್ಯುತ್ತಮವಾಗಿತ್ತು. ತಂತ್ರಜ್ಞಾನದ ಗೀಳಿನ ಕಿರಿಯರು, ವಿದ್ಯಾರ್ಥಿಗಳು, ಸೈಬರ್ ಸೆಕ್ಯುರಿಟಿ ವೃತ್ತಿಪರರು ಮತ್ತು ಇತರ ಆಸಕ್ತರು ನಮ್ಮೊಂದಿಗೆ ಮಾತುಕತೆ ನಡೆಸಲು ಉತ್ಸುಕರಾಗಿದ್ದರು. ಸೈಬರ್ ಭದ್ರತೆಗೆ ಸಂಬಂಧಿಸಿದ ಮನಸೆಳೆಯುವ ಆಟಗಳನ್ನು ಆಡಲು ನಮ್ಮ ಮಳಿಗೆಗೆ ಬಂದವರಿಗೆ ಏರ್ಪಾಟುಮಾಡಲಾಗಿತ್ತು.

21




- **CySecK is back with the "Samgacchadhwam Series"**
- As a part of the Samgacchadhwam series of webinars- a free webinar was conducted for students/ faculty/ working professionals on the topic “Cryptography: Concepts and Applications.” Prof. Srinivas Vivek from the International Institute of Information Technology Bangalore (IIT-B) was the speaker.
- ಸಂಗಚದ್ವಮ್ ಸರಣಿಯ ವೆಬಿನಾರ್‌ಗಳ ಭಾಗವಾಗಿ ವಿದ್ಯಾರ್ಥಿಗಳು/ಅಧ್ಯಾಪಕರು/ಕೆಲಸದಲ್ಲಿರುವ ವೃತ್ತಿಪರರಿಗೆ “ಕ್ರಿಪ್ಟೋಗ್ರಫಿ: ಹೊಳಹುಮತ್ತು ಬಳಕೆಗಳು”ಎಂಬ ವಿಷಯದ ಬಗೆಗಿನ ಉಚಿತ ವೆಬಿನಾರ್ ಅನ್ನು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರಿನ ಅಂತರರಾಷ್ಟ್ರೀಯ ಮಾಹಿತಿತಂತ್ರಜ್ಞಾನ ಸಂಸ್ಥೆಯ (ಐಐಟಿ-ಬಿ) ಪ್ರೊ.ಶ್ರೀನಿವಾಸ್ ವಿವೇಕ್ ಮಾತುಗಾರರಾಗಿದ್ದರು.

# ಉಪಯುಕ್ತ ಲಿಂಕ್‌ಗಳು | USEFUL LINKS

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in
- ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**

## "See Yourself in Cyber: Together we make it Safer"



# ನಮ್ಮ ಬಗ್ಗೆ | ABOUT CYSECK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.